ಓ.ಎಸ್. ನಂಬರಃ 36/2021

**ಡಿ. ಡಬ್ಲ್ಯೂಃ 1**

**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು, ತಾಃ 07–01–2026)**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಆರ್.ಆರ್.ಎಸ್. ವಕೀಲರಿಂದ,**

5. ನನ್ನ ಕಳೆದ ಪಾಟೀ ಸವಾಲಿನಲ್ಲಿ ಹೇಳಿದಂತೆ ಪ್ರತಿವಾದಿ ಮತ್ತು ಅವರ ಸಹೋದರ ಶನಿಯಾರ ಗೋವಿಂದಪ್ಪ ನಾಯ್ಕ ರವರಿಗೆ ತೊಂಡಿ ವಾಂಟಣೆಯ ಪ್ರಕಾರ 00-17-00 ಜಾಗ ಜಂಟಿಯಾಗಿ ಅವರ ಪಾಲಿಗೆ ಬಂದಿರುತ್ತದೆ ಎಂದರೆ ಹೌದು. ಸ್ದ್ರಿ ತೊಂಡಿ ವಾಂಟಣೆಯ ನಂತರ ಪ್ರತಿವಾದಿ ಮತ್ತು ಅವರ ಸಹೋದರ ಶನಿಯಾರ ಗೋವಿಂದಪ್ಪ ನಾಯ್ಕ ರವರ ನಡುವೆ ಸ್ದ್ರಿ 00-17-00 ಜಾಗಕ್ಕೆ ಸಂಬಂಧಿಸಿದಂತೆ ಪಾಲು ಪಟ್ಟಿ ಆಗಿರುವುದಿಲ್ಲ.

6. 2000 ರಿಂದ 2004 ನೇ ಇಸವಿಯವರೆಗೆ ಪ್ರತಿವಾದಿ ಮತ್ತು ಅವರ ಸಹೋದರ ಶನಿಯಾರ ಗೋವಿಂದಪ್ಪ ನಾಯ್ಕ ರವರ ಸಂಬಂಧ ಚೆನ್ನಾಗಿತ್ತು. ಸ್ದ್ರಿ ಅವಧಿಯಲ್ಲಿ ಪ್ರತಿವಾದಿ ಮತ್ತು ಅವರ ಸಹೋದರ ಬೇರೆ ಬೇರೆ ಮನೆಗಳಲ್ಲಿ ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಇರುತ್ತಿದ್ದರು. ಸ್ದ್ರಿ ಎರಡೂ ಮನೆಗಳು ಸರ್ವೆ ನಂ. 6/1ಬ ದಲ್ಲಿರುವ ಜಾಗದಲ್ಲಿದೆ. 2000 ರಿಂದ 2004 ನೇ ಇಸವಿಯ ಅವಧಿಯಲ್ಲಿ ಪ್ರತಿವಾದಿ ಈ ಮೇಲೆ ಹೇಳಿದ 00-17-00 ಜಾಗವನ್ನು ಹೊರತುಪಡಿಸಿ, ಬೇರೆ ಯಾವುದೇ ಜಾಗವನ್ನು ಖರೀದಿ ಮಾಡಿರುವುದಿಲ್ಲ, ಹಾಗೆ ಬೇರೆ ಯಾವುದೇ ಜಾಗದ ಕಬ್ಜಾ ಹೊಂದಿರುವುದಿಲ್ಲ. 2000 ರಿಂದ 2004 ನೇ ಇಸವಿಯ ಅವಧಿಯಲ್ಲಿ ನಾನೂ ಸಹ ಈ ಮೇಲೆ ಹೇಳಿದ 00-17-00 ಜಾಗದಲ್ಲಿರುವ ಮನೆಯಲ್ಲಿ ವಾಸವಾಗಿದ್ದೆನು. 2000 ರಿಂದ 2004 ನೇ ಇಸವಿಯ ಅವಧಿಯಲ್ಲಿ ದಾವಾ ಆಸ್ತಿಯನ್ನು ವರ್ಷಾನುಗಟ್ಟಲೇ ಬಿಟ್ಟು ಬೇರೆ ಕಡೆ ವಾಸವಾಗಿರಲಿಲ್ಲ. ಸ್ದ್ರಿ ಅವಧಿಯಲ್ಲಿ ದಾವಾ ಆಸ್ತಿಯಲ್ಲಿ ನಮ್ಮಲ್ಲಿ ಯಾರಾದರೊಬ್ಬರು ಇರುತ್ತಿದ್ದರು.

7. ಸರ್ವೆ ನಂ. 6/1ಬ ರಲ್ಲಿರುವ 00-17-00 ಜಾಗದಲ್ಲಿ 00-04-12 ಜಾಗವು ನಮ್ಮ ಕಬ್ಜಾದಲ್ಲಿದ್ದು, ಅದು ರಸ್ತೆಗೆ ತಾಗಿಕೊಂಡು ಇರುತ್ತದೆ ಎಂದರೆ, ಸಾಕ್ಷಿಯು ನಾವು 00-08-08 ಜಾಗದಲ್ಲಿ ಕಬ್ಜಾದಲ್ಲಿದ್ದು, ಅದು ರಸ್ತೆಯ ಪಕ್ಕದಲ್ಲಿ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ನಾನು ಹೇಳುವಂತೆ ನಮ್ಮ ಕಬ್ಜಾದಲ್ಲಿರುವ ಜಾಗವನ್ನು ಬಿಟ್ಟು, ಉಳಿಕೆ ಜಾಗಕ್ಕೆ ನಮ್ಮ ಜಾಗದ ಮೂಲಕವೇ ಹೋಗಬೇಕು ಎಂದರೆ ಸರಿಯಲ್ಲ, ನಮ್ಮ ಜಾಗದ ಸುತ್ತಲೂ ಕಂಪೌಂಡ್ ಇರುತ್ತದೆ. ಉಳಿಕೆ ಜಾಗಕ್ಕೆ ಹೋಗಲು ಪ್ರತ್ಯೇಕ ರಸ್ತೆ ಇರುತ್ತದೆ. ಸ್ದ್ರಿ ಪ್ರತ್ಯೇಕ ರಸ್ತೆಯು ನಾವು ಕಬ್ಜಾದಲ್ಲಿರುವ ಜಾಗದ ದಕ್ಷಿಣಕ್ಕೆ ಇರುತ್ತದೆ. ಸ್ದ್ರಿ ರಸ್ತೆಯು ಮುಖ್ಯ ರಸ್ತೆಗೆ ತಲುಪುವುದಿಲ್ಲ. ಅದು ರತ್ನಾರವರ ಮನೆಗೆ ಹೋಗುವ ರಸ್ತೆ ಆಗಿರುತ್ತದೆ. ನಮ್ಮ ಜಾಗದ ಉತ್ತರಕ್ಕೆ ಇರುವ ರಸ್ತೆ ಭಟ್ಕಳಕ್ಕೆ ಬರುವ ಮುಖ್ಯ ರಸ್ತೆಗೆ ತಲುಪುತ್ತದೆ. ನಾನು ಈ ಮೇಲೆ ಹೇಳಿದಂತೆ ನಮ್ಮ ಕಬ್ಜಾದಲ್ಲಿರುವ ಜಾಗದ ಉತ್ತರಕ್ಕೆ ಇರುವ ರಸ್ತೆಯ ಮೂಲಕ ಮಾತ್ರ ಸ್ದ್ರಿ ಸರ್ವೆ ನಂ. ನ ಉಳಿಕೆ ಜಾಗಕ್ಕೆ ಹೋಗಬೇಕು ಎಂದರೆ, ಸಾಕ್ಷಿಯು ನಮ್ಮ ಮನೆಯ ಮುಂದೆ ಇರುವ ರಸ್ತೆ ಮತ್ತು ದಕ್ಷಿಣದಲ್ಲಿರುವ ರಸ್ತೆ ಒಂದೇ ಕಡೆ ಸೇರುತ್ತದೆ ಎಂದು

ಉತ್ತರಿಸಿರುತ್ತಾರೆ. ನಮ್ಮ ಮನೆ ಇರುವ ಕಂಪೌಂಡ್ ನ ಉತ್ತರಕ್ಕೆ ಇರುವ ರಸ್ತೆಯ ಮೂಲಕ ಉಳಿಕೆ ಜಾಗಕ್ಕೆ ಹೋಗಬೇಕು ಎಂದರೆ ಹೌದು.

8. ಪ್ರತಿವಾದಿ ಮತ್ತು ಶನಿಯಾರ ಗೋವಿಂದಪ್ಪ ನಾಯ್ಕ ರವರು ಜಂಟಿಯಾಗಿ ಜನತಾ ಕೋ-ಆಪರೇಟಿವ್ ಸೊಸೈಟಿ, ಭಟ್ಕಳದಲ್ಲಿ ಐದು ಲಕ್ಷದ ನಲವತ್ತು ಸಾವಿರದಾ ಎಂಟು ನೂರಾ ಇಪ್ಪತ್ತು ರೂಪಾಯಿ ಸಾಲ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ, ಶನಿಯಾರ ಗೋವಿಂದಪ್ಪ ನಾಯ್ಕ ರವರು ಅವರ ಪಾಲಿನ ಜಾಗಕ್ಕೆ ಸಂಬಂಧಿಸಿದಂತೆ ಸಾಲ ಪಡೆದಿದ್ದು, ಜಾಗವು ಇಬ್ಬರ ಹೆಸರಿನಲ್ಲಿದ್ದ ಕಾರಣ, ಪ್ರತಿವಾದಿ ಸದ್ರಿ ಸಾಲಕ್ಕೆ ಜಾಮೀನುದಾರರಾಗಿದ್ದರು ಎಂದು ಉತ್ತರಿಸಿರುತ್ತಾರೆ. ನಾನು ಸುಳ್ಳು ಹೇಳುತ್ತಿದ್ದು, ಪ್ರತಿವಾದಿ ಮತ್ತು ಅವರ ಸಹೋದರ ಶನಿಯಾರ ಗೋವಿಂದಪ್ಪ ನಾಯ್ಕ ರವರು ಜಂಟಿಯಾಗಿ ಈ ಮೇಲೆ ಹೇಳಿದ ಸಾಲವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಮತ್ತು ಅವರ ಸಹೋದರ ಶನಿಯಾರ ಗೋವಿಂದಪ್ಪ ನಾಯ್ಕ ರವರು ಮೇಲೆ ಹೇಳಿದ ಸಾಲದಲ್ಲಿ ಅಸಲು ಮತ್ತು ಬಡ್ಡಿ ಸೇರಿ, ಆರು ಲಕ್ಷದ ಎಪ್ಪತ್ತೊಂದು ಸಾವಿರದಾ ಎಂಬತ್ತೊಂದು ರೂಪಾಯಿಗಳು ಬಾಕಿ ಇದ್ದು, ಆ ಬಗ್ಗೆ ಸಾಲದ ವಸೂಲಾತಿಗಾಗಿ ಸಹಕಾರಿ ಸಂಘಗಳ ನಿಬಂಧಕರು, ಕುಮಟಾ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಲಾಗಿತ್ತು ಎಂದರೆ, ಸಾಕ್ಷಿಯು ಪ್ರತಿವಾದಿಯ ವಿರುದ್ಧ ಪ್ರಕರಣ ದಾಖಲಾಗಿರುವುದಿಲ್ಲ, ಕೇವಲ ಶನಿಯಾರ ಗೋವಿಂದಪ್ಪ ನಾಯ್ಕ ರವರ ವಿರುದ್ಧ ಮಾತ್ರ ಪ್ರಕರಣ ದಾಖಲಾಗಿತ್ತು ಎಂದು ಉತ್ತರಿಸಿರುತ್ತಾರೆ. ನಿಡಿ-5 ರ ಆದೇಶದಂತೆ, ಪ್ರತಿವಾದಿ ಮತ್ತು ಅವರ ಸಹೋದರ ಶನಿಯಾರ ಗೋವಿಂದಪ್ಪ ನಾಯ್ಕ ರವರ ವಿರುದ್ಧ ಹಣ ವಸೂಲಾತಿ ಪ್ರಕರಣ ದಾಖಲಾಗಿದ್ದರೂ ಸಹ ಈಗ ಪ್ರತಿವಾದಿ ವಿರುದ್ಧ ಪ್ರಕರಣ ದಾಖಲಾಗಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತದನಂತರ ನಿಡಿ-5 ರ ಆದೇಶದಂತೆ, ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ, ಹೊನ್ನಾವರದಲ್ಲಿ ಅಮಲ್ಜಾರಿ ಅರ್ಜಿ ಸಂಖ್ಯೆ 101/2004 ರಂತೆ ಪ್ರತಿವಾದಿ ಮತ್ತು ಅವರ ಸಹೋದರ ಶನಿಯಾರ ಗೋವಿಂದಪ್ಪ ನಾಯ್ಕ ರವರ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು ಎಂದರೆ, ಸಾಕ್ಷಿಯು ಪ್ರತಿವಾದಿ ಜಾಮೀನುದಾರರಾಗಿದ್ದು, ನೋಟೀಸು ಮಾತ್ರ ಬಂದಿರುತ್ತದೆ, ಹರಾಜು ಪ್ರಕ್ರಿಯೆ ಶನಿಯಾರ ಗೋವಿಂದಪ್ಪ ನಾಯ್ಕ ರವರಿಗೆ ಸಂಬಂಧಿಸಿದಂತೆ ಮಾತ್ರ ಆಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಸದ್ರಿ ಅಮಲ್ಜಾರಿ ಪ್ರಕರಣದಲ್ಲಿ ಪ್ರತಿವಾದಿ ವಕೀಲರ ಮೂಲಕ ಹಾಜರಾಗಿದ್ದರು ಎಂದರೆ, ಆ ಬಗ್ಗೆ ನನಗೆ ಗೊತ್ತಿಲ್ಲ. ಸದ್ರಿ ಅಮಲ್ಜಾರಿ ಪ್ರಕರಣದಲ್ಲಿ ದಾವಾ ಆಸ್ತಿಯ ಹರಾಜು ಪ್ರಕ್ರಿಯೆಗಳ ಬಗ್ಗೆ ನನಗೆ ಗೊತ್ತಿಲ್ಲ. ಸದ್ರಿ ಅಮಲ್ಜಾರಿ ಪ್ರಕರಣದಲ್ಲಿ ದಾವಾ ಆಸ್ತಿಯ ಹರಾಜಿನ ನೋಟೀಸನ್ನು ಪ್ರತಿವಾದಿಯ ಮನೆಗೆ ಅಂಟಿಸಿ, ಜಾರಿ ಮಾಡಲಾಗಿತ್ತು ಎಂದರೆ ಸರಿಯಲ್ಲ.

9. ತಂಪುಮನೆ, ರಘುನಾಥ ರಸ್ತೆ, ಭಟ್ಕಳ ಇದು ನಮ್ಮ ವಿಳಾಸ ಎಂದರೆ, ಸಾಕ್ಷಿಯು ಮೊದಲು ಆ ವಿಳಾಸ ಕೊಡುತ್ತಿದ್ದೆವು, ಈಗ ತಲಾಂದ್, ಭಟ್ಕಳ, ಅಂಚೆಃ ಮುಟ್ಟಳ್ಳಿ ಎಂದು ಕೊಡುತ್ತೇವೆ ಎಂದು ಹೇಳಿರುತ್ತಾರೆ. ಈ ವಿಳಾಸವನ್ನು 20 ವರ್ಷಗಳಿಂದ ನೀಡುತ್ತಿದ್ದೇವೆ. 2000 ರಿಂದ 2004 ನೇ ಇಸವಿಯ ಅವಧಿಯಲ್ಲಿ ತಂಪುಮನೆ, ರಘುನಾಥ ರಸ್ತೆ, ಭಟ್ಕಳ ಎಂದು ನಮ್ಮ ವಿಳಾಸ ಇತ್ತು. ಅಮಲ್ಜಾರಿ ಪ್ರಕರಣದ ನೋಟೀಸು, ಜಾಹೀರನಾಮೆ, ಹರಾಜು ನೋಟೀಸ್ ತಂಪುಮನೆ, ರಘುನಾಥ ರಸ್ತೆ, ಭಟ್ಕಳ ಈ ವಿಳಾಸಕ್ಕೆ

ನಮಗೆ ಜಾರಿಯಾಗಿದೆ ಎಂದರೆ ಗೊತ್ತಿಲ್ಲ. 2000 ರಿಂದ 2004 ನೇ ಇಸವಿಯ ಅವಧಿಯಲ್ಲಿ ತಂಪುಮನೆ, ರಘುನಾಥ ರಸ್ತೆ, ಭಟ್ಕಳದಲ್ಲಿ ನಾವು ವಾಸವಾಗಿದ್ದರಿಂದ ಈ ಮೇಲೆ ಹೇಳಿದ ಎಲ್ಲಾ ನೋಟೀಸ್ ಗಳು ನಮಗೆ ಜಾರಿಯಾಗಿರುತ್ತವೆ ಎಂದರೆ, ಸಾಕ್ಷಿಯು ಶನಿಯಾರ ಗೋವಿಂದಪ್ಪ ನಾಯ್ಕ ರವರಿಗೆ ಜಾರಿಯಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಅದೇ ರೀತಿ ಪ್ರತಿವಾದಿಗೂ ಸಹ ಸದ್ರಿ ನೋಟೀಸ್ ಗಳು ಜಾರಿಯಾಗಿರುತ್ತವೆ ಎಂದರೆ ಸರಿಯಲ್ಲ. ತದನಂತರ, ಹರಾಜು ಪ್ರಕ್ರಿಯೆ ನಡೆದು ವಾದಿಯ ತಂದೆಗೆ ದಾವಾ ಆಸ್ತಿಯು ಡಿಕ್ರಿ ಸರ್ಟಿಫಿಕೇಟ್ ಮೂಲಕ ದಾವಾ ಆಸ್ತಿಯ ಸಂಪೂರ್ಣ ಕ್ಷೇತ್ರ ಅವರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದ್ರಿ ಹರಾಜು ಪ್ರಕ್ರಿಯೆಯನ್ನು ಪ್ರತಿವಾದಿ ಎಲ್ಲೂ ಪ್ರಶ್ನೆ ಮಾಡಿರುವುದಿಲ್ಲ. ಸದ್ರಿ ಹರಾಜು ಪ್ರಕ್ರಿಯೆಯನ್ನು ಪ್ರತಿವಾದಿ ಎಲ್ಲೂ ಪ್ರಶ್ನೆ ಮಾಡದೇ ಇರುವುದರಿಂದ ದಾವಾ ಆಸ್ತಿಯ 00-17-00 ಜಾಗದಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಹರಾಜು ಪ್ರಕ್ರಿಯೆ ಬಗ್ಗೆ ನನಗೆ ಮತ್ತು ಪ್ರತಿವಾದಿಗೆ ಮಾಹಿತಿ ಇದ್ದರೂ ಸಹ, ಮಾಹಿತಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗಾಗಿ ದಾವಾ ಆಸ್ತಿಯಲ್ಲಿ ನಮ್ಮ ಕಬ್ಜಾದಲ್ಲಿರುವ 00-04-12 ಜಾಗವನ್ನು ವಾದಿಗೆ ಬಿಟ್ಟುಕೊಡಲು ಪ್ರತಿವಾದಿ ಬಾಧ್ಯರಿರುತ್ತಾರೆ ಎಂದರೆ ಸರಿಯಲ್ಲ, ನಮ್ಮ ಜಾಗ ಹರಾಜು ಆಗಿರುವುದಿಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**